SATYAVADI Founded 1917 Regd. No. M 1299

ಸತ್ಯವಾದಿ

(ಕಿರಮನೆ ಸಿರಸ್ತೇದ್ದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂವತ್ಸರ 29 ಸಂಚಿಕೆ 169] ಶನಿವಾರ 16—3—46 [ಬಿಡಿ ಪ್ರತಿ 3 ಪೈ

ಶ್ರೀ ಚನಯನವರಿಗೆ ಮಹದಿಜಯ

ಇ ಶೆ ಏ

ಮೈಸೂರು, ಮಾ 16 — ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಸದಸ್ಯ ಆಯ್ಕೆಯ ಬಗ್ಗೆ ಮೈಸೂರಿನಿಂದ ನಿನ್ನೆಯ ದಿವಸ ಚುನಾವಣೆ ನಡೆಯಿತು. ಶ್ರೀಮಾ ದಾಸಪ್ಪನವರಿಗೆ ಹೆಚ್ಚು ಮತಗಳು ಬರಬಹುದೆಂದು ಕಾಂಗ್ರೆಸ್ ಕಛೇರಿಯ ವಾತಾವರಣ ತಿಳಿಸುತ್ತಿದ್ದಿತು. ಆದರೆ ಚುನಾವಣೆಯಲ್ಲಿ ಉಮೇದುವಾರರಾಗಿದ್ದ ಶ್ರೀಮಾ ಪಿ ಏ. ನಾರಾಯಣ ಮೂರ್ತಿಗಳು ತಮ್ಮ ಸ್ಥಾನವನ್ನು ಸಾಹುಕಾರ್ ಶ್ರೀಮಾ ಚನ್ನಯ್ಯನವರಿಗಾಗಿ ಬಿಟ್ಟು ಕೊಟ್ಟರು. ಮತದಾನವಾದನಂತರ ಮತಗಳ ಎಣಿಕೆಯಾಗಲು, ಸಾಹುಕಾರ್ ಶ್ರೀಮಾ ಚೆನ್ನಯ್ಯನವರಿಗೆ 33 ಮತಗಳು ದೊರೆತು ಮಹದ್ವಿಜಯವಾಯಿತು. ಶ್ರೀಮಾ ದಾಸಪ್ಪನವರಿಗೆ ಕೇವಲ 14 ಮತಗಳು ದೊರೆತವು. ಪೌರಸಭೆಯ ಕಾಂಗ್ರೆಸ್ ಪಕ್ಷದ 22 ಸದಸ್ಯರುಗಳೂ ಸಾಹುಕಾರ್ ಶ್ರೀಮಾ ಚನ್ನಯ್ಯನವರಿಗೇ ಮತದಾನ ಮಾಡಿದರು.

ನ್ಯಾಯಸಿಧಾಯಕ ಸಭೆಯ ಸದಸ್ಯರಾದ ಶ್ರೀ ಹೆಚ್. ಎಂ. ಚನ್ನ ಬಸಪ್ಪನವರ ಧರ್ಮಪತ್ನಿ ಶ್ರೀಮತಿ ನಂಜಮ್ಮನವರು ಮೊನ್ನೆ ರಾತ್ರೆ ಚಲುವಾಂಬ ಹೆರಿಗೆ ಆಸ್ಪತ್ರೆಯಲ್ಲಿ ಹೆರಿಗೆಯಾದನಂತರ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ ಮೃತರಿಗೆ ಮೂರು ಜನ ಗಂಡು ಮಕ್ಕಳಿರುವರು ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ.

ಆಹಾರ ಸಾಗುವುದನ್ನು ತಪ್ಪಿಸುವ ಸಲುವಾಗಿ ರಾತ್ರಿಯು ನೇಳೆ ಖಾಸಗೀ ಲಾರಿಗಳು ಓಡಾಡಕೂಡದೆಂದು ತುಮಕೂರು ಜಿಲ್ಲಾಧಿಕಾರಿಗಳು ಭಾರತ ರಕ್ಷಣಾ ಕಾನೂನಿನ ಪ್ರಕಾರ ಆಜ್ಞೆಯೊಂದನ್ನು ಹೊರಡಿಸಿದ್ದಾರೆ.

ಮೈಸೂರು, ಮಾ 16 — ಚಾಮರಾಜ ಆಗ್ರಹಾರದಲ್ಲಿ ಕೋತಿಗಳ ಹಾವಳಿಯಿಸೀಕವಾಗಿದೆ. ಅದನ್ನಟ್ಟಿಗ ಶ್ರೀ ಶಾಮಾಚಾರ್ ಮತ್ತು ಅವರಮನೆ ವಿದ್ವಾನ್ ಶ್ರೀ ಕರೂರು ಶೇಷಾಚಾರ್ಯರ ಮಗ ಸಂಪತ್ತು ಎಂಬವನನ್ನು ಪರಚಿ ತೀವ್ರಗಾಯಗೊಳಿಸಿದೆ.

ಕರಾಚಿ, ಮಾ 15 — ಆಗಾಖಾನ್ ದಂಪತಿಗಳಿಗೆ ಪೌರಸಭೆ ಮಾನಪತ್ರವನ್ನರ್ಪಿಸಿತು.

ವಡಿಗೇನಹಳ್ಳಿಯಲ್ಲಿ ನಾಳೆಯ ದಿವಸದಿಂದ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ನಿಜಲಿಂಗಪ್ಪನವರು ಪ್ರವಾಸ ಮಾಡುವರು.

ಮೈಸೂರು, ಮಾ 16 — ಇದುವರೆವಿಗೆ 72500 ಮಂದಿಗೆ ಸಿಡಿಬು ಹಾಕಿರುವುದಾಗಿ ತಿಳಿಯಬಂದಿದೆ.

ಮೈಸೂರು, ಮಾ 16 — ಈ ದಿವಸ ಬೆಂಗಳೂರಿನಿಂದ ಹೊರಟ ಮೇಲ್ ಬಂಡಿಯು ಇಲ್ಲಿಗೆ 3 ಘಂಟೆಗೆ ಬಂದಿತು.

ಬೊಂಬಾಯಿ, ಮಾ 14 — ಬಾಂಬೆ ದಂಗೆಯ ಸಮಯದಲ್ಲಿ ಶ್ರೀಮತಿ ಅರುಣ ಅಸಫಾಲಿ ದಸ್ತಗಿರಿಯಾಗದೇಕೆತ್ತೆಂದೂ ವೈಸ್ರಾಯರು ಒಪ್ಪಿಗೆ ಕೊಡಲಿಲ್ಲವೆಂದೂ ತಿಳಿಯಬಂದಿದೆ.

ಬೊಂಬಾಯಿ, ಮಾ 14 — ಮಾನವರು ಕ್ರೈಸ್ತ ಸಾಧುಗಳ ಗಾಂಧೀಜಿಯ ಪಾದ ಮುಟ್ಟಿ ಪ್ರಣಾಮ ಮಾಡಿದರು.

ವಾಷಿಂಗ್ಟನ್, ಮಾ 14 — ಇದೇ ತಾ || 25 ಸ್ಯೂಯಾರ್ಕಿನಲ್ಲಿ ವಿಶ್ವಭದ್ರತಾ ಸಮ್ಮೇಳನ ಸೇರುವುದು.

ಕೇಪ್‌ಟೌನ್, ಮಾ 14 — ರಷ್ಯಾಯುದ್ಧಕ್ಕೆ ಹವಣಿಸಿಲ್ಲವೆಂದು : ಜ || ಸ್ಮಟ್ಸರ ಅಭಿಪ್ರಾಯವಾಗಿದೆ.

'ನೇತಾಜೀ ಜೀವಿಸಿರುವರು

" ವೈಸರೀತತ್ವದಿಂದ ನನಗೆ ನೀವು ಏನು ಬೇಕಾದರೂ ಹೇಳಬಹುದು. ಹೃದಯದಲ್ಲಿ ಹೃದಯವನ್ನಿಟ್ಟು, ನೇತಾಜಿ ಸುಭಾಷ್ ಚಂದ್ರ ಬೋಸರು ಸಜೀವಿಗಳಾಗಿರುವುದಾಗಿ ನಾನು ಇನ್ನೂ ನಂಬುತ್ತೇನೆ " ಎಂಬುದಾಗಿ ಮಹಾತ್ಮಗಾಂಧೀಜಿಯವರು ಕ್ಯಾ || ಷಾ ನವಾಜ್ ಮತ್ತು ಕ್ಯಾ || ಷೇಗಾಲರೊಡನೆ ಕಳೆದ ತಾ || 13 ರ ರಾತ್ರೆ ಸಂಭಾಷಿಸಿದಾಗ ತಿಳಿಸಿದರೆಂದು, ಕ್ಯಾ || ಷೇಗಾಲ್ ತನಗೆ ತಿಳಿಸಿದ್ದಾಗಿ ಯು. ಪಿ. ಐ. ಪ್ರತಿನಿಧಿ ತಿಳಿಸಿರುವರು.

ನಂಜನಗೂಡಿನಲ್ಲಿ ಹೋಟೆಲ್ ಸಂಘ ಸ್ಥಾಪನೆ

ನಂಜನಗೂಡು ತಾ || 13-3-46 ರಲ್ಲಿ ಶ್ರೀ ಪಿ. ಸಿ. ಶಿವಶಂಕರವರ ಮನೆಯಲ್ಲಿ ಭಾಸ್ಕಿಕವಾಯಿತು ಹೋಟೆಲ್ ಕೆಲಸಗಾರರೆಲ್ಲರೂ ಬಂದಿದ್ದರು. ಮೈಸೂರು ಹೋಟೆಲಿನ ಕೆಲಸಗಾರರ ಸಂಘದ ಕಾರ್ಯದರ್ಶಿಗಳಾದ ಶ್ರೀ ಟಿ. ಎಸ್. ಸುಬ್ಬಣ್ಣನವರು ಸಂಘದ ಅವಶ್ಯಕತೆಯನ್ನು ವಿವರಿಸಿದರು. ಶ್ರೀ ಹೆಜ್ಜಿಗೆ ಲಿಂಗಣ್ಣನವರು ಅಧ್ಯಕ್ಷರಾಗಿಯೂ ಮತ್ತು ಶ್ರೀ ಪಿ. ಸಿ. ಶಿವಶಂಕರರನ್ನು ಕಾರ್ಯದರ್ಶಿಯನ್ನಾಗಿಯೂ ಆರಿಸಲಾಯಿತು ವಂದನೆಯಾದ ಮೇಲೆ ಸಭೆಯು ಮುಗಿಯಿತು.

ಜಿ ಐ. ಪಿ. ರೈಲ್ವೆ ಕೆಲಸಗಾರರ ಸಂಘವು ಮುಂದುವರಿಯುತ್ತಿದೆ.

ಸಂಸ್ಥಾನ ಸುದ್ದಿಗಳು

ಮೈಸೂರು ಸಂಸ್ಥಾನದ ಜೀವವಿಮೆ ಶಾಖೆಯ ಡೆಪ್ಯೂಟಿ ಸೆಕ್ರಟರಿಯವರಿಗೆ ತಾ || 18 ರಿಂದ 1 ತಿಂಗಳಕಾಲ ರಜಾ ಕೊಡಲಾಗಿದೆ.

ಂ ಂ

ಬೆಂಗಳೂರಿನ ಅಡ್ವೊಕೇಟರಾದ ಶ್ರೀ ಬಾಪಾ ರೆಡ್ಡಿಯವರನ್ನು ಸಾಗರದ ಎರಡನೇ ದರ್ಜೆ ಮುನ್ಸಿಫರನ್ನಾಗಿ ನೇಮಿಸಲಾಗಿದೆ.

ಂ ಂ

ಆಸ್ಥ ಡೈರೆಕ್ಟರಾದ ಶ್ರೀ ಸುಂದರರಾಯರು ನಾಡಿದ್ದು ಪತ್ರಿಕಾಗೋಷ್ಠಿ ಕರೆದಿರುವರು.

ಂ ಂ

ರಸಾಯನೀಕ ವಸ್ತು ಮತ್ತು ಬಣ್ಣಗಳನ್ನು ಟಿಕ್ಸ್‌ಟೈಲ ಶಾಖೆ ಅನುಮತಿ ಇಲ್ಲದೆ ವ್ಯಾಪಾರ ಮಾಡಕೂಡದೆಂದು ತಿಳಿಯಬಂದಿದೆ.

ಚೌದ್ರಿ ಅಕ್ಬರ್ ಖಾ ಹೇಳಿಕೆ

ಈಚಿಗೆ ಮತ ಪ್ರಾಕ್ಟಿಕ ತ್ವವೆಂಬ ವ್ಯಾಧಿಯನ್ನು ಜಿನ್ನಾರವರು ಇಂಗ್ಲೆಂಡಿಗೆ ರಪ್ತು ಮಾಡಿದರು ಪ್ರಜಾ ಸತ್ತಾತ್ಮಕವಾದ ಅಂಗ್ಲೇಯ ವಾತಾವರಣದಲ್ಲಿ ಅಭಿವೃದ್ಧಿ ಹೊಂದುವ ಸೂಚನೆಗಳು ಕಾಣ ಬರುವುದಿಲ್ಲ. ಇಪ್ಪತ್ತು ಮಂದಿ ಮುಸ್ಲಿಮರು ಹೋಗೊಮ್ಮೆ ಮುಸ್ಲಿಂ ಲೀಗಿಗೆ ಸೇರಿಕೊಳ್ಳಲು ಶಕ್ತರಾದರು. ಇಲ್ಲಿ ಹನ್ನೆರಡು ಮಂದಿಯನ್ನು ಜಿನ್ನಾರವರು ಆಶೀರ್ವಾದ ಮಾಡಿ ರಂತೆ. ಇನ್ನು ಇಬ್ಬರಿಗೆ ಪೋಟೋ ಲೀಗನ್ನು ಏರ್ಪಡಿಸಿದರು. ಅವರ ಜಿನ್ನಾರವರ ನಾಯಕತ್ವವನ್ನು ಅಂಗೀಕರಿಸುವುದಿಲ್ಲ. ಇಲ್ಲಿ ಮುಸ್ಲಿಂ ಲೀಗು ಹೆಸರಿಗೆ ಮಾತ್ರ. ಆದರೆ ಭಾರತೀಯ ಪತ್ರಿಕಾ ಪ್ರಪಂಚದಲ್ಲಿ ಅಂದೋಳನೆಯನ್ನುಂಟು ಮಾಡುವ ಕೆಲಸಕ್ಕೆ ಬರುತ್ತವೆ.

ನು ಭಾ ಷ್

ರ ಪ ರ

ಜೀವನ ಚರಿತ್ರೆ

ಹುಟ್ಟಿದ್ದು, ಬೆಳೆದದ್ದು, ದೇಶಕ್ಕಾಗಿ ಸತತವೂ ದುಡಿದದ್ದು, ಇಂದು ಸಾಧಿಸಿದ್ದು ಎಲ್ಲವನ್ನೂ ಸಂಗ್ರಹಿಸಿ ಕೊಡಲಾಗಿದೆ.

ಅಂದು ಬಾಬು —

— ಇಂದು ನೇತಾಜಿ

ಬರೆದವರು **" ಕಾಂತ್ "**

ಸಾಹಿತ್ಯ ಮಂದಿರ

ಜಗನ್ಮೋಹನ ಬಂಗ್ಲೆ ರಸ್ತೆ

ಮೈಸೂರು

At Opera — 2 ನೇ ವಾರ

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

.... ವಿಶ್ವಾಸ್....

At Ranjit From 10-3-46

Shirin Farad

— with —

RAGINI & JAYANT

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. ೩-೪-೦ ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಹಸಿ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

ಶಕ್ತಿಸುಧಾ

ಅಲ್ಪ ವ್ಯಯದ ಕಾಯಕಲ್ಪ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಬೆಲೆ ಡಬ್ಬಿಗೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೬ ಜಾಮರಾಜಪುರಂ, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore